**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಸುರಪುರ**
**ಸಾಃ ಸುರಪುರ**

| | |
|---|---|
| ಸಿ.ಸಿ. ನಂ | 51/2022 |
| ಸಿ.ಡಬ್ಲ್ಯೂ-8 | ಪಿ.ಡಬ್ಲ್ಯೂ-4 |
| ದಿನಾಂಕ | 15.07.2025 |

| | |
|---|---|
| ಹೆಸರು | ಮನೋಹರ |
| ತಂದೆ/ತಾಯಿ/ಗಂಡನ ಹೆಸರು | ಬಾಬು ರಾಠೋಡ |
| ವಯಸ್ಸು | 53 ವರ್ಷ |
| ಉದ್ಯೋಗ | ಎ ಎಸ್ ಐ ಸುರಪುರ |
| ವಾಸ | ಸುರಪುರ |

**ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ ಎಪಿಪಿ ರವರಿಂದ**

ದಿನಾಂಕ 21.01.2022 ರಿಂದ ಇಲ್ಲಿಯವರೆಗೆ ಸುರಪುರ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 22.01.2022 ರಂದು ಸಾಯಂಕಾಲ 04.30 ಗಂಟೆ ಸುಮಾರಿಗೆ ನಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾಸಾ1 ರವರು ಠಾಣೆಗೆ ಹಾಜರಾಗಿ ಒಂದು ಬೆರಳಚ್ಚು ಮಾಡಿದ ಪಿರ್ಯಾದಿಯನ್ನು ಪಂಚನಾಮೆ ಜೊತೆಗೆ ಮುದ್ದೆಮಾಲುಗಳನ್ನು 1250/- ನಗದು ಹಣ ಒಂದು ಬಾಲ್ ಪೆನ್ ಅವುಗಳ ಆಧಾರದ ಮೇಲೆ ಠಾಣಾ ಗುನ್ನೆ ಸಂಖ್ಯೆ 15/2022 ಕಲಂ.78 ಕೆ ಪಿ ಆಕ್ಟ ರಡಿಯಲ್ಲಿ ಪ್ರ.ವ.ವರದಿಯನ್ನು ತಯಾರಿಸಿ ಮೂಲ ಪಂಚನಾಮೆ ಪಿರ್ಯಾದಿ ಮತ್ತು ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆನು. ಅದೇ ದಿನ ಚಾಸಾ4 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡೆನು. ಆರೋಪಿತನಿಗೆ ದಂಡ ಪ್ರಕ್ರಿಯೇ ಸಂಹಿತೆ 41(ಎ) ರಡಿಯಲ್ಲಿ ನೋಟಿಸ್ ನೀಡಿದೆನು. ದಿನಾಂಕ 23.01.2022 ರಂದು ಆರೋಪಿತನ ವಿರುದ್ದ ಸಾಕಷ್ಟು ಸಾಕ್ಷಾದರಗಳು ಕಂಡು ಬಂದಿದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದೆನು. ನ್ಯಾಯಾಲಯದ ಮುಂದಿರುವ ಆರೋಪಿತನನ್ನು ನೋಡಿ ಗುರುತಿಸುತ್ತಾರೆ. ಜಪ್ತುಪಡಿಸಿಕೊಂಡ ಮುದ್ದೆಮಾಲುಗಳನ್ನು ನೋಡಿದರೆ ಗುರುತಿಸುತ್ತಾರೆ ಅವುಗಳನ್ನು ಈಗಾಗಲೇ ಮೂ.ಮಾ1 ರಿಂದ 3 ಎಂದು ಗುರುತಿಸಲಾಗಿದೆ. ಪಿರ್ಯಾದಿಯನ್ನು ನೋಡಿ

ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ2 ಎಂದು ಗುರುತಿಸಲಾಗಿದೆ. ಸಹಿಯನ್ನು ನಿಪಿ2(ಬಿ) ಎಂದು ಗುರುತಿಸಲಾಯಿತು. ಜಪ್ತುಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ1 ಎಂದು ಗುರುತಿಸಲಾಗಿದೆ. ಸಹಿಯನ್ನು ನಿಪಿ1(ಸಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ3 ಸಹಿಯನ್ನು ನಿಪಿ3(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಶ್ರೀ ಎಸ್ ಎ ವಕೀಲರಿಂದ**

ನಾನು ಪಂಚನಾಮೆ ಆಧಾರದ ಪಿರ್ಯಾದಿಯನ್ನು ದಾಖಲಿಸಿಕೊಂಡಿದ್ದೇನೆ ಎಂದರೆ ಸರಿ. ಪಿರ್ಯಾದಿ ನೀಡಿದವರು ನನ್ನ ಮೇಲಾಧಿಕಾರಿಗಳು ಎಂದರೆ ಸರಿ. ನಾನು ಪಿರ್ಯಾದಿ ಆಧಾರದ ಮೇಲೆ ಪ್ರಕರಣ ದಾಖಲಿಸಿಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತನಿಖೆಯಲ್ಲಿ ಆರೋಪಿ ಉಪಯೋಗಿಸಿದ ಪೆನ್ನು ಯಾವ ಕಂಪನಿ ಯಾವ ಬಣ್ಣದ ಮಸಿ ಎಂದು ನನ್ನ ವರದಿಯಲ್ಲಿ ನಮೂದಿಸಿಲ್ಲ. ನಾನು ಹಾಜರುಪಡಿಸಿದ ದೋಷಾರೋಪಣೆ ಪಟ್ಟಿಯಲ್ಲಿ ನೋಟಿನ ಮುಖಬೆಲೆಯನ್ನು ತೋರಿಸಿಲ್ಲ. ನಾನು ಸ್ವೀಕರಿಸಿಕೊಂಡ ಚೀಟಿಯಲ್ಲಿ ಮೊದಲು ನಂಬರ್ ನಂತರ ದುಡ್ಡು ಇರುತ್ತದೆ. ಅದಕ್ಕೆ ಪೂರ್ವಕವಾಗಿ ಯಾವುದೇ ದಾಖಲೆ ಸಲ್ಲಿಸಿಲ್ಲ. ಎ ಪಿ ಎಂ ಸಿ ಯ ಮಾರುಕಟ್ಟೆಯಲ್ಲಿ ನಾವು ಜಪ್ತುಪಡಿಸಿಕೊಂಡ ಚೀಟಿ ತರಹದ ಚೀಟಿಯನ್ನು ಕೊಡುತ್ತಾರೆ ಎಂದರೆ ಸರಿಯಲ್ಲ. ಚೀಟಿಯಲ್ಲಿ ಬರೆದಿರುವ ಅಕ್ಷರದಲ್ಲಿ ಪೆನ್ನಿನಲ್ಲಿರುವ ಮಸಿಯಲ್ಲಿ ನಾವು ತುಲನೆ ಮಾಡಿ ನೋಡಿಲ್ಲ. ನಾನು ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ4 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಕರ್ತವ್ಯದಲ್ಲಿ ಇರುವುದಕ್ಕೆ ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು
ಸುರಪುರ